# IN THE COURT OF THE ADDL. SENIOR CIVIL JUDGE & JMFC., GUBBI
# OS – **234/2023**

Witness present and duly sworn on : 19.08.2025.

Further cross Examination: by Counsel for Defendant No.2 and 3 :

ಕೆಂಪೆಗೌಡ ಅಲ್ಲ ಆದರೆ ಕಂಬೇಗೌಡ @ ಕಂಬಯ್ಯ ಎಂದರೆ ಸರಿಯಲ್ಲ. ಕಂದಾಯ ಅಧಿಕಾರಿಗಳು ಪರಿಶೀಲನೆ ಮಾಡಿ ಸದರಿ ಕಂಬೇಗೌಡ ರವರ ಹೆಸರಿಗೆ MR No.3/1984-85 ರಂತೆ ದಾಖಲೆಗಳು ಬದಲಾವಣೆ ಆಗಿವೆ ಎಂದರೆ ಸರಿಯಲ್ಲ. ಸದರಿ ಕಂಬೇಗೌಡ ರವರ ನಿದನದ ನಂತರ 1 ರಿಂದ 7ನೇ ಪ್ರತಿವಾದಿಗಳು ಅವರು ವಾರಸುದಾರರಾಗಿ ಪೌತಿವಾರಸು ಖಾತೆ ಮಾಡಿಸಿಕೊಂಡಿದ್ದಾರೆಂದರೆ ಸರಿಯಲ್ಲ.

ದಾವಾ ಐಟಂ ನಂ.2 ಜಮೀನಿಗೆ ಸಂಭಂದಿಸಿದಂತೆ OS No.213/2001 ವಿಭಾಗ ಕೋರಿ ದಾವೆ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ದಾವಾ ಐಟಂ ನಂ.2 ಸರ್ವೆ ನಂ.1/3 ಎ ಸದರಿ OS No.213/2001 ರಲ್ಲಿ ಡಿಕ್ರಿಯಾಗಿದೆ ಎಂದರೆ ಸರಿಯಲ್ಲ. ಸದರಿ OS No.213/2001 ರಲ್ಲಿ ಅಂತಿಮ ಡಿಕ್ರಿ ಆಗಿದ್ದು, ಸದರಿ ಜಮೀನಿನಲ್ಲಿ ನಮಗೆ ಮಾಲೀಕತ್ವ ಕೇಳಲು ಹಕ್ಕು ಇಲ್ಲ ಎಂದರೆ ಸರಿಯಲ್ಲ.

1 ರಿಂದ 3ನೇ ಪ್ರತಿವಾದಿಗಳು ಎ.ಸಿ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಸದರಿ ಮೇಲ್ಮನವಿ ಪುರಸ್ಕರಿಸಿ 2 ಮತ್ತು 3 ನೇ ಪ್ರತಿವಾದಿಗಳ ಕುಟುಂಬಸ್ಥರನ್ನು ಸರ್ವೆ ನಂ.1/3 ಎ ರಲ್ಲಿ ಸೇರಿಸಿದರು ಎಂದರೆ ಸರಿಯಲ್ಲ. ಅದರ ನಂತರ ಖಾತೆ ಪಹಣಿ ಆಗಿದೆ ಎಂದರೆ ಸರಿಯಲ್ಲ. ಅವರುಗಳು ಸದರಿ ಜಮೀನಿನ ಪಹಣಿ ಪತ್ರಿಕೆಯಲ್ಲಿ ಸೇರ್ಪಡೆಯಾಗಿದ್ದಾರೆಂದರೆ ಸರಿಯಲ್ಲ. ಸದರಿ ಪಹಣಿ ಪತ್ರಿಕೆಯನ್ನು ನಾನು ಎ.ಸಿ ನ್ಯಾಯಾಲಯದಲ್ಲಿ RRTA RA GUB 223/2023 ರಂತೆ ಮೇಲ್ಮನವಿ ಸಲ್ಲಿಸಿದ್ದೇನು ಎಂದರೆ ಸರಿ. ಸದರಿ ಮೇಲ್ಮನವಿ ದಿನಾಂಕಃ 03.10.2023 ರಂದು ವಜಾ ಆಗಿದೆ ಎಂದರೆ ಸರಿ. ಸದರಿ ಆದೇಶದ ವಿರುದ್ದ ನಾವು ಮೇಲ್ಮನವಿ ಸಲ್ಲಿಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಈ ದಾವೆ ಸಲ್ಲಿಸಿದ್ದೇವೆ.

ಪ್ರತಿವಾದ ಪತ್ರದ ಆಸ್ತಿಯು ಸುಮಾರು 100 ವರ್ಷ ಗಳಿಂದ 2 ಮತ್ತು 3 ನೇ ಪ್ರತಿವಾದಿಗಳ ವಂಶಸ್ಥರು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ನನ್ನ ತಾತ ಸಿದ್ದಾಪುರದ ನರಸಯ್ಯನವರು ಬೋರಮ್ಮನವರಿಗೆ ಮರಣ ಶಾಸನ ಮಾಡಿದ್ದಾರೆಂದು ಸುಳ್ಳು ಹೇಳಿದ್ದೇನೆಂದರ ಸರಿಯಲ್ಲ. ಸದರಿ ಬೋರಮ್ಮ ನನ್ನ ಅಜ್ಜಿ. ಮರಣ ಶಾಸನ ಆಗಿರುವುದಿಲ್ಲ ಆದರೆ ನಾವು ಅದನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ಸದರಿ ಆಸ್ತಿಯಲ್ಲಿ ನನ್ನ ತಾತನಿಗೆ ಯಾವುದೇ ಹಕ್ಕು ಇಲ್ಲದೆ ಇದ್ದರು ಸಹ ಅದನು ಕಬಳಿಸಲು ಮರಣ ಶಾಸನವನ್ನು ಸೃಷ್ಟಿಸಿದ್ದೇವೆಂದರೆ ಸರಿಯಲ್ಲ. ಕಂಬೇಗೌಡ @ ಕಂಬಯ್ಯ ರವರ ಹೆಸರಿಗೆ ಆದ MR No.3/1984-85 ನಾವು ಪ್ರಶ್ನಿಸಿರುವುದಿಲ್ಲ. ದಾವಾ ಐಟಂ ನಂ.2 ಆಸ್ತಿಗಳ ಮೇಲೆ ನಮಗೆ ಯಾವುದೇ ಹಕ್ಕು ಇಲ್ಲದೆ ಇದ್ದರು ಸಹ ಸುಳ್ಳು ದಾಖಲೆಗಳನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾವು ಸುಳ್ಳು ವ್ಯಾಜ್ಯ ಕಾರಣ ಸೃಷ್ಟಿಸಿ ದಾವೆ ಸಲ್ಲಿಸಿದ್ದೇವೆಂದರೆ ಸರಿಯಲ್ಲ. ನನ್ನ ತಾತನ ಮರಣ ಪತ್ರವನ್ನು ನಾನು ಾಜರುಪಡಿಸಿಲ್ಲ. ನನ್ನ ಅಜ್ಜಿ ರವರ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದೇನೆ. ಮರಣ ಶಾಸನದ ಆಧಾರದ ಮೇಲೆ ಖಾತೆ ಪಹಣಿಯನ್ನು ಬದಲಾವಣೆ ಮಾಡಿಕೊಳ್ಳಲಿಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**Cross Examination: by Counsel for Defendant No.5 to 7 :**

Counsel called out absent. Hence, taken as nil.

**Re-examination-Nil.**

(Typed to my dictation in open court)

R.O.I & A.C.

Addl. Senior Civil Judge and
JMFC., Gubbi